**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ,**

**ಸಿರುಗುಪ್ಪ**

**ಸಿ.ಸಿ. ನಂ.284/2020**

**ಸಿ.ಡಬ್ಲ್ಯೂ:5 ಪಿ.ಡಬ್ಲ್ಯೂ:4**

ಸಾಕ್ಷಿದಾರನ ಹೆಸರು : ಎಂ ಬಿ ಗೌಸ

ತಂದೆಯ ಹೆಸರು : ಜಾಫರ್ ಸಾಬ

ವಯಸ್ಸು : 54 ವರ್ಷ

ಕೆಲಸ : ಎ.ಎಸ್.ಐ ಪಿ ಡಿ ಹಳ್ಳಿ ಪಿ ಎಸ್

ವಾಸ : ಪಿ ಡಿ ಹಳ್ಳಿ

**ಸಾಕ್ಷಿಗೆ ದಿನಾಂಕಃ 27.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ದಿಃ 25.09.2019 ರಿಂದ 04.03.2023 ರ ವರೆಗೆ ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕಾರ್ಯನಿರ್ವಹಿಸಿದ್ದೆನೆ.

2. ದಿಃ 26.03.2020 ರಂದು ಬೆಳಿಗ್ಗೆ 10.00 ಗಂಟೆಗೆ ಹಚ್ಚೊಳ್ಳಿ ಪೋಲೀಸ್ ಠಾಣೆಯಲ್ಲಿದ್ದಾಗ ಚಾಸಾ 1 ರವರಿಗೆ ಬೀರಳ್ಳಿ ಗ್ರಾಮದ ರಾವಿಹಾಳ್ ರಸ್ತೆಯಲ್ಲಿ ಅನಧಿಕೃತ ಮಧ್ಯ ಮಾರಾಟ ಮಾಡುತ್ತಿದಾರೆ ಎಂಬ ಖಚಿತ ಮಾಹಿತಿಯ ಮೇರೆಗೆ ಚಾಸಾ 1 ರವರು , ಚಾಸಾ 4 ರವರಿಗೆ ಇಬ್ಬರು ಪಂಚರನ್ನು ಬರಮಾಡಿಸಿಕೊಳ್ಳಲು ಹೇಳಿದಂತೆ ಅವರು ಇಬ್ಬರು ಪಂಚರಾದ ಚಾಸಾ 2 ಮತ್ತು 3 ಅವರಿಗೆ ದಾಳಿ ಮಾಡಲು ಕೋರಿಕೊಂಡ ಮೇರೆಗೆ ಅವರು ಒಪ್ಪಿ ಅವರಿಗೆ ನೋಟೀಸು ನೀಡಿ ನಂತರ ನಾನು , ಚಾಸಾ 1, 4, 6 ರಿಂದ 8 ರ ಜೊತೆ ಪಂಚರ ಸಂಗಡ ಇಲಾಖೆ ಜೀಪ್ ಸಂಖ್ಯೆ ಕೆ.ಎ 34 ಜಿ-258 ನೇದ್ದರಲ್ಲಿ ಬೆಳಿಗ್ಗೆ 10.30 ಗಂಟೆಗೆ ಠಾಣೆ ಬಿಟ್ಟು 10.45 ಗಂಟೆಗೆ ಬೀರಳ್ಳಿ ಗ್ರಾಮಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ಮರೆಗೆ ನಿಂತು ನೋಡಲು ಒಬ್ಬ ವ್ಯಕ್ತಿಯು ರಟ್ಟಿನ ಬಾಕ್ಸಿನಲ್ಲಿ ಮಧ್ಯವನ್ನು ಸಂಗ್ರಹಿಸಿ ಸಾರ್ವಜನಿಕರಿಗೆ ಕೊಡುತ್ತಿದ್ದನ್ನು ನೋಡಿ ನಾವು ಮತ್ತು ಪಂಚರು ಹೋಗಿ ದಾಳಿ ಮಾಡಲಾಗಿ ಮಧ್ಯವನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯು ಹಾಗೂ ಸಾರ್ವಜನಿಕರು ಓಡಿ ಹೋಗಿರುತ್ತಾರೆ, ಹಿಡಿಯಲು ಪ್ರಯತ್ನಿಸಿದಾಗ ಓಡಿ ಹೋದ ವ್ಯಕ್ತಿಯು ಸಿಕ್ಕಿರುವುದಿಲ್ಲ. ಚಾಸಾ 1

ರವರು ಸಿಬ್ಬಂದಿ ಪಂಚರ ಸಮಕ್ಷಮ ಸ್ಥಳವನ್ನು ಪರಿಶೀಲನೆ ಮಾಡಲಾಗಿ ಅಲ್ಲಿದ್ದ ಮೂರು ರಟ್ಟಿನ ಬಾಕ್ಸ್ಗಳಲ್ಲಿ ಮದ್ಯವು ಕಂಡು ಬಂದಿದ್ದು ಒಂದು ಬಾಕ್ಸ್ನಲ್ಲಿ 180 ಎಂ.ಎಲ್ ನ ಎಂ.ಸಿ ವಿಸ್ಕಿ 48 ಬಾಟಲಿಗಳು ಇದ್ದು ಒಂದು ಬಾಟಲಿಯ ಬೆಲೆ 162.22 ರೂ. ಒಟ್ಟು ಬೆಲೆ 7,786.56-00 ಇದ್ದು ಇನ್ನೊಂದು ಬಾಕ್ಸಿನಲ್ಲಿ 90 ಎಂ ಎಲ್ ನ 8 ಪಿ.ಎಂ ವಿಸ್ಕಿ 12 ಟೆಟ್ರಾ ಪೌಚ್ ಇದ್ದು ಒಂದು ಬಾಟಲಿಯ ಬೆಲೆ 45.10 ರೂ. ಒಟ್ಟು ಬೆಲೆ 541.02-00 ಇದ್ದು , ಇನ್ನೊಂದು ರಟ್ಟಿನ ಬಾಕ್ಸಿನಲ್ಲಿ 90 ಎಂ.ಎಲ್ ನ ಫ್ರೆಂಡ್ಸ್ ಕ್ಲಬ್ ವಿಸ್ಕಿ 48 ಟೆಟ್ರಾ ಪೌಚ್ ಇದ್ದು ಒಂದು ಬೆಲೆ 30.32 ರೂ. ಒಟ್ಟು ಬೆಲೆ 1,455.36-00 ಇದ್ದು , ಅವುಗಳನ್ನು ಚಾಸಾ 1 ರವರು ಪರಿಶೀಲನೆ ಮಾಡಿ ಇದರಲ್ಲಿ ಇದ್ದ ತಲಾ ಎರಡರಂತೆ ಮದ್ಯದ ಪೌಚ್ ತೆಗೆದು ಬಿಳಿ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ ಅರಗಿನಿಂದ ಸೀಲ್ ಮಾಡಿ ಪಂಚರು ಮತ್ತು ತನ್ನ ಸಹಿ ಇದ್ದ ಚೀಟಿಯನ್ನು ಅಂಟಿಸಿ ಸ್ಥಳದಲ್ಲಿ ಬೆ.11.00 ರಿಂದ 11.30 ಗಂಟೆ ವರೆಗೆ ಪಂಚನಾಮೆಯನ್ನು ಬರೆದು ಅದಕ್ಕೆ ತನ್ನ ಸಹಿ ಮತ್ತು ಪಂಚರ ಸಹಿಯನ್ನು ಪಡೆದಿರುತ್ತಾರೆ. ನಾವು ಸಿಬ್ಬಂದಿ ಸಹ ಪಂಚನಾಮೆಗೆ ಸಹಿ ಮಾಡಿದ್ದೇವೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿಃ 1 ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿಃ 1(ಡಿ) ಎಂದು ಗುರುತಿಸಲಾಯಿತು. ನಂತರ ಚಾಸಾ 1 ರವರು ಮುದ್ದೆಮಾಲನೊಂದಿಗೆ ಠಾಣೆಗೆ ಮರಳಿ ಹಚ್ಚೊಳ್ಳಿ ಪೋಲೀಸ್ ಠಾಣೆಯಲ್ಲಿ ಪ್ರ.ಥ.ವ ಯನ್ನು ಸಲ್ಲಿಸಿದ್ದಾರೆ. ನಂತರ ದಿಃ 27.05.2020 ರಂದು ಆರೋಪಿಯು ಮಾನ್ಯ ನ್ಯಾಯಾಲಯದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಬಂದು ಠಾಣಾ ಅಧಿಕಾರಿ ಮುಂದೆ ಹಾಜರಾದಾಗ ವಿಚಾರಿಸಲು ಆರೋಪಿಯು ತನ್ನ ಹೆಸರು ಗೋಪಾಲ್ ತಂದೆ ಹನುಮಂತಪ್ಪ , ವಾಸಃ ಬೀರಳ್ಳಿ ಎಂದು ತಿಳಿಸಿದ್ದನು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಹಾಗೂ ಮು ಮಾ ನ್ನು ನೋಡಿ ಗುರುತಿಸಿರುತ್ತಾರೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಕೆ ವಕೀಲರಿಂದ

3. ಘಟನಾ ಸ್ಥಳದಲ್ಲಿ ಓಡಿ ಹೋದ ವ್ಯಕ್ತಿಯ ಬಗ್ಗೆ ಅಲ್ಲಿ ನೆರದಿದ್ದ ಸಾರ್ವಜನಿಕರಲ್ಲಿ ನಾವು ವಿಚಾರ ಮಾಡಲಿಲ್ಲ. ಘಟನಾ ಸ್ಥಳದಲ್ಲಿ ಆರೋಪಿಯ ವಿವರ ನನಗೆ ಗೊತ್ತಿರಲಿಲ್ಲ. ಘಟನಾ ಸ್ಥಳವು ಬೀರಳ್ಳಿ ಮಠಕ್ಕೆ ಹೋಗುವ ದಾರಿ ಆಗಿರುತ್ತದೆ. ಆ ರೀತಿ ನಾನು ಹೇಳಿಕೆಯಲ್ಲಿ ಹೇಳಿಲ್ಲ. ಘಟನಾ ಸ್ಥಳದಲ್ಲಿ ಬಹಳಷ್ಟು ಜನರು ಇದ್ದರು ಎಂದರೆ ಸರಿ. ನಮ್ಮನ್ನು ನೋಡಿ ಮದ್ಯ ಖರೀದಿ ಮಾಡುತ್ತಿದ್ದ ಎಲ್ಲರೂ ಓಡಿ ಹೋದರು. ಅವರು ಎಷ್ಟು ಜನರು ಇದ್ದರು ಎಂದು ನೆನಪಿಲ್ಲ. ಸ್ಥಳದ ಚಕ್ಕುಬಂದಿ

ನೆನಪಿಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನೆನಪಿಲ್ಲ. ಪಂಚರ ಹೆಸರು ಬಸವರಾಜ ಹಾಗೂ ದೇವಣ್ಣ. ಅವರು ಹಚ್ಚೊಳ್ಳಿ ಹಾಗೂ ಚಿಕ್ಕಬಳ್ಳಾರಿಯವರು. ಸದರಿ ದಿನ ಯಾವುದೇ ದಾಳಿ ನಡೆಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಕೃತ್ಯ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಇರುವ ಮುದ್ದೆ ಮಾಲಿಗೆ ಮತ್ತು ಆರೋಪಿಗೆ ಯಾವುದೇ ಸಂಭಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಅಪರಾದ ಮಾಡದೇ ಇದ್ದರೂ ಕೂಡ ಚಾಸಾ 1 ರವರು ಇಲಾಖಾ ಅಂಕಿ ಅಂಶ ಸಲುವಾಗಿ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**